**ಪಿ. ಮತ್ತು ಎಸ್.ಸಿ.. ನಂ. 22/2025**
**ಪಿ.ಡಬ್ಲ್ಯು 01**

**ಸಾಕ್ಷಿಯನ್ನು ಇಂದು ದಿಃ 06.02.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ಶ್ರೀ ಎಂ.ಬಿ.ಪಿ., ವಕೀಲರಿಂದ**

1) ಸಿಂದಗಿ ಸಬ್-ರಜಿಸ್ಟ್ರಾರ ಕಛೇರಿಗೆ ಯಾರು-ಯಾರು ಹೋಗಿದ್ದರು ಎಂದು ನನಗ ಗೊತ್ತಿರುವುದಿಲ್ಲ. ನಿಂಗಪ್ಪ ತೀರಿಕೊಂಡ ಬಳಿಕ ಮೃತ್ಯುಪತ್ರವು ಸೂಟಕೇಸಿನಲ್ಲಿ ಸಿಕ್ಕಿರುತ್ತದೆ. ಮೃತ್ಯುಪತ್ರದ ಜೊತೆ ಬೇರೆ ಯಾವುದೇ ಕಾಗದ ಇರಲಿಲ್ಲ.

2) ಮೃತ್ಯುಪತ್ರ ನನ್ನ ಕೈಗೆ ಸಿಕ್ಕ ಬಳಿಕ ವಕೀಲರು ಓದಿ ಹೇಳಿರುತ್ತಾರೆ. ನನಗೆ ಕನ್ನಡ ಓದಲಿಕ್ಕೆ-ಬರೆಯಲಿಕ್ಕೆ ಬರುವುದಿಲ್ಲ. ಮೃತ್ಯುಪತ್ರದಲ್ಲಿ ಅಸಲು ದಾವಾ ನಂ.107/2016 ರ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಓ.ಎಸ್.ನಂ.107/2016 ರ ತೀರ್ಪಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಎರಡು ಅಪೀಲುಗಳು ಚಾಲ್ತಿಯಲ್ಲಿರುತ್ತವೆ ಎಂದರೆ ನನಗೆ ಗೊತ್ತಿಲ್ಲ.

3) ಮೃತ್ಯುಪತ್ರದಲ್ಲಿ ಅವುಗಳ ಬಗ್ಗೆ ಉಲ್ಲೇಖವಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸುನಂದಾ ಮತ್ತು ಅವರ ಮಕ್ಕಳು ನಿಂಗಪ್ಪ ತೀರಿಕೊಂಡ ಬಳಿಕ ಆತನ ಮರಣಾನಂತರ ಬರತಕ್ಕ ಪರಿಹಾರದ ಬಗ್ಗೆ ಸಿಂದಗಿ ನ್ಯಾಯಾಲಯದಲ್ಲಿ ಪಿ. ಮತ್ತು ಎಸ್.ಸಿ. ನಂ.84/2022 ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಈಗಲೂ ಕೂಡ ನಾವು ಪಿ. ಮತ್ತು ಎಸ್.ಸಿ. ನಂ.84/2022 ರ ಆದೇಶದ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ.

**ಪಿ. ಮತ್ತು ಎಸ್.ಸಿ.. ನಂ. 22/2025**
**ಪಿ.ಡಬ್ಲ್ಯು 01**

4) ಸ್ನೇಹಾ ಇವಳು ಮಹೇಶ ಮತ್ತು ನಿಂಗಪ್ಪ ಇವರ ಮೇಲೆ ಅಸಲು ದಾವಾ ನಂ.185/2017 ದಾಖಲಿಸಿದ್ದಳು ಎಂದರೆ ನನಗೆ ಗೊತ್ತಿಲ್ಲ. ಅದರ ಬಗ್ಗೆ ಮೃತ್ಯುಪತ್ರದಲ್ಲಿ ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ.

5) ನಿಂಗಪ್ಪನು ಸುನಂದಾಳ ವಿರುದ್ಧ ವಿಚ್ಛೇದನ ಕೋರಿ ದಾವೆ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ಅದರ ಬಗ್ಗೆಯೂ ಕೂಡ ಮೃತ್ಯುಪತ್ರದಲ್ಲಿ ಉಲ್ಲೇಖವಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮೃತ್ಯುಪತ್ರವನ್ನು ನಿಂಗಪ್ಪ ಕೊಟ್ಟ ಮಾಹಿತಿಯ ಪ್ರಕಾರ ಬರೆದಿಲ್ಲ ಎಂದರೆ ಸರಿಯಲ್ಲ. ನಿಂಗಪ್ಪನಿಗೆ ಗೊತ್ತಿರಲಾರದೇ ಆತನ ಸಹಿ ತೆಗೆದುಕೊಂಡು, ನಾನು ಮತ್ತು ಸಾಕ್ಷಿದಾರರು ಕೂಡಿಕೊಂಡು ಖೊಟ್ಟಿ ಮೃತ್ಯುಪತ್ರವನ್ನು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ,

4 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ

**ಪಿ. ಮತ್ತು ಎಸ್.ಸಿ.. ನಂ. 22/2025**

**ಪಿ.ಡಬ್ಲ್ಯು 02**

**ಸಾಕ್ಷಿಯನ್ನು ಇಂದು ದಿಃ 06.02.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ.ಬಿ.ಪಿ., ವಕೀಲರಿಂದ**

1) ನನ್ನ ಖುದ್ದು ಊರು ಇಂಡಿ ತಾಲೂಕಾ ಬರಗುಡಿ ಇರುತ್ತದೆ. ಬರಗುಡಿಗೂ ಮತ್ತು ಸಿಂದಗಿಗೂ 70 ಕಿ.ಮೀ. ಅಂತರವಿರುತ್ತದೆ. ಮೃತ್ಯುಪತ್ರ ಮಾಡಲಿಕ್ಕೆ ನಿಂಗಪ್ಪ ಹೇಳಿರುತ್ತಾನೆ. ನಿಂಗಪ್ಪ ನನಗೆ ಪರಿಚಯದವನಿರುತ್ತಾನೆ. ನಿಂಗಪ್ಪ ನನಗೆ ಸಂಬಂಧಿಕನಲ್ಲ. ಮೃತ್ಯುಪತ್ರ ಮಾಡಲಿಕ್ಕೆ ಸಿಂದಗಿಗೆ ಹೋಗಿದ್ದೆ. ನಾನು ತಹಶೀಲ್ದಾರ ಆಫೀಸಿಗೆ ಹೋಗಿರುತ್ತೇನೆ.

2) ನಾನು ಹೋಗುವುದಕ್ಕಿಂತ ಮೊದಲು ಸಿದ್ರಾಮ ದೊಡಮನಿ ಇವರು ಹಾಜರಿದ್ದರು. ಸಿದ್ರಾಮ ದೊಡಮನಿ ಇವರು ಯಾವ ಊರಿನವರು ಎಂದು ಗೊತ್ತಿರುವುದಿಲ್ಲ. ಬಾಂಡ ರೈಟರ್ ಅವರು ಟೈಪ್ ಮಾಡಿರುತ್ತಾರೆ. ಬಾಂಡ ರೈಟರ್ ಹತ್ತಿರ ಟೈಪ್ ಮಷಿನ್ ಇತ್ತೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ.

3) ಮೃತ್ಯು ಪತ್ರ ಬರೆಯಲಿಕ್ಕೆ ನಿಂಗಪ್ಪ ಮಾಹಿತಿ ಕೊಟ್ಟಿರುತ್ತಾನೆ. ಮೃತ್ಯುಪತ್ರವನ್ನು ನಿಂಗಪ್ಪನೇ ಬರೆಸಿಕೊಂಡು ತೆಗೆದುಕೊಂಡು ಬಂದಿರುತ್ತಾನೆ. ಮೃತ್ಯುಪತ್ರವನ್ನು ಮಧ್ಯಾಹ್ನ 12.30-01.00 ಘಂಟೆಗೆ ಸಬ್ ರಜಿಸ್ಟ್ರಾರ ಕಛೇರಿಯಲ್ಲಿ ಕೊಟ್ಟಿರುತ್ತಾರೆ. ಮೃತ್ಯುಪತ್ರದ ಮೇಲೆ ನಿಂಗಪ್ಪನು ನಾಲ್ಕು ಸಹಿಗಳನ್ನು ಮಾಡಿರುತ್ತಾರೆ. ಮೃತ್ಯುಪತ್ರಕ್ಕೆ ಸಿದ್ರಾಮ ದೊಡಮನಿ ಎನ್ನುವವನೂ ಕೂಡ ಸಹಿ ಮಾಡಿರುತ್ತಾನೆ. ನಾನೂ ಕೂಡ ಸಹಿ ಮಾಡಿರುತ್ತೇನೆ. ನಮ್ಮನ್ನು ಬಿಟ್ಟು ಬೇರೆ ಯಾರೂ ಸಹಿ ಮಾಡಿರುವುದಿಲ್ಲ.

4) ಮೃತ್ಯುಪತ್ರವನ್ನು ಮಾಡುವುದಕ್ಕಿಂತ ಮೊದಲು ನಿಂಗಪ್ಪ ವಿಜಯಪುರದಲ್ಲಿದ್ದನು. ಅವರು ವಿಜಯಪುರದಲ್ಲಿ ಎಲ್ಲಿ ಇರುತ್ತಿದ್ದರು ಎಂದು ಗೊತ್ತಿರುವುದಿಲ್ಲ. ಮೃತ್ಯುಪತ್ರ ಬರೆದ ಮೇಲೆ ಅದರ ಮಾಹಿತಿಯನ್ನು ನಿಂಗಪ್ಪ ಓದಿ ಹೇಳಿರುತ್ತಾನೆ. ಮೃತ್ಯುಪತ್ರ ಬರೆದು ಆದ ನಂತರ ಯಾರ ಕೈಯಲ್ಲಿ ಕೊಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಮೃತ್ಯುಪತ್ರ ನೊಂದಣಿಯಾದ ನಂತರ ಮಧ್ಯಾಹ್ನ 03.00 ಘಂಟೆಗೆ ಸಬ್ ರಜಿಸ್ಟ್ರಾರ ಕಛೇರಿ ಬಿಟ್ಟಿರುತ್ತೇವೆ.

5) ನನ್ನ ಸಾಕ್ಷಿ ರೂಪದ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಮೃತ್ಯುಪತ್ರದಲ್ಲಿ ಎರಡು ಹೊಲ ಮತ್ತು ಒಂದು ಮನೆಯ ಬಗ್ಗೆ ಉಲ್ಲೇಖ ಇರುತ್ತದೆ. ಮನೆಯು ಸಿಂದಗಿಯಲ್ಲಿರುತ್ತದೆ. ಹೊಲಗಳೂ ಕೂಡ ಸಿಂದಗಿಯಲ್ಲಿರುತ್ತವೆ. ಮೃತ್ಯುಪತ್ರದಲ್ಲಿ ಏನೇನು ಬರೆದಿರುತ್ತಾರೆಂದು ನನಗೆ ತರ್ಕ ಇರುವುದಿಲ್ಲ.

6) ಮೃತ್ಯುಪತ್ರ ನೊಂದಣಿಯಾದ ನಂತರ ನಿಂಗಪ್ಪ ವಿಜಯಪುರಕ್ಕೆ ಹೋಗಿರುತ್ತಾನೆ. ಸಿದ್ರಾಮ ದೊಡಮನಿಯವರು ತಮ್ಮ ಮನೆಗೆ ಹೋಗಿರುತ್ತಾರೆ. ಮೃತ್ಯುಪತ್ರವನ್ನು ನಾನು, ದೊಡಮನಿ ಮತ್ತು ಮೃತ್ಯುಪತ್ರ ಮಾಡಿಸಿಕೊಂಡ ಕಸ್ತೂರಿಬಾಯಿ ಸೇರಿಕೊಂಡು ಖೊಟ್ಟಿಯಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಕಸ್ತೂರಿಬಾಯಿಯ ಗಂಡನ ಹೆಸರು ಶಿವರಾಮ ಗಾಯಕವಾಡ ಇರುತ್ತದೆ ಎಂದರೆ ನಿಜ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ,

4 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ